ಕಡ್ಲೂರು ಡಿಸ್ಟ್ರಿಕ್ಟ್.

ಸ್ ೧೯೦೩ನೆ ಇಸವಿ ನವಂಬರ್ ತಾರೀಖು 19.

ಕಾಫಿ ಸಾಗವಳಿಗೆ ಕಲ್ಲತ್ತಿ ಎಸ್ಟೇಟ್ ಮೈ|| ಸೆಂಟಕ್ಲೇರ್ ಜ್ಯಾರ್ಜ್ ಸ್ ಸಾಹೇಬರವರು ದರಖಾಸ್ತು ಮಾಡಿರುವ ತರೀಕೆರೆ ತಾಲ್ಲೂಕು ಕಲ್ಲತ್ತಿಪುರ ಗ್ರಾಮದಲ್ಲಿರುವ ಸರ್ವೆ ನಂಬರು 4ರಲ್ಲಿ ಪೋಡಾಗಿರುವ 100 ಎಕರೆ 11 ಗುಂಟೆ ಉಳ್ಳ ನಂಬರು 32ನೆ ಜಮೀನನ್ನು ತರೀಕೆರೆ ತಾಲ್ಲೂಕು ಅಮಲ್ದಾರ್‌ರವರು ಸ್ ೧೯೦೪ನೆ ಇಸವಿ ಜನವರಿ ತಾರೀಖು 7ನೆ ಗುರುವಾರ ದಿವಿ 11 ಘಂಟೆಗೆ ತರೀಕೆರೆ ಮೊಕ್ಕಾಂನಲ್ಲಿ ಬಹಿರಂಗವಾದ ಹರಾಜು ಮಾಡಿಸುವರು ಯಂತಲೂ-ಜಾಸ್ತಿ ತಪಸೀಲು ಇದರೆ ಹಿಂದಿನ ವಾರದ ಗೆಜೆಟ್ಟಿನಲ್ಲಿ ನಮೂದಿರುತ್ತೆಯಂತಲೂ ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸಿರುತ್ತ.

ಎಂ. ನಾರಾಯಣರಾವ್,
ಡೆಪ್ಯೂಟಿ ಕಮಿಷನರ್.

ಶಿವಮೊಗ್ಗ ಡಿಸ್ಟ್ರಿಕ್ಟ್ ಜಡ್ಜ್‌ರವರ ಕೋರ್ಟಿನಲ್ಲಿ.

ಸ್ ೧೯೦೩—೧೯೦೪ನೆ ಇಸವಿ ಮಿಸ್ ಅರ್ಜೀ ನಂಬರ್ 140.

ಮೃತಪಟ್ಟ ಚೆನ್ನಗಿರಿ ತಾಲ್ಲೂಕು ಹೊದಿಗೆರೆ ಮಾಗಣಿ ಕಂಚಿಗನಹಾಳಲ್ಲಿದ್ದ ಗಂಗೋನಹಳ್ಳಿ ತಿಮ್ಮಣ್ಣನವರ ಆಸ್ತೀ ವಿಷಯದಲ್ಲಿ—

ಅರ್ಜೀದಾರು, ಚೆನ್ನಗಿರಿ ತಾಲ್ಲೂಕು ಹೊದಿಗೆರೆ ಮಾಗಣಿ ಕಂಚಿಗನಹಾಳಲ್ಲಿರುವ 1. ಗಂಗೋನಹಳ್ಳಿ ತಿಮ್ಮಣ್ಣ, 2. ಈತನ ತಮ್ಮ ಹನುಮಂಣ, ಮೃತಪಟ್ಟ ಸದರೀ ತಿಮ್ಮಣ್ಣನವರಿಗೆ ಖಾಸಾ ಮಕ್ಕಳು ಆಗಬೇಕೆಂಬ ಹಕ್ಕುದಾರಿ ಮೇಲೆ ಕಂಚಿಗನಹಾಳ ಸ್ಥಳದ 1. ತಿಮ್ಮಣ್ಣ, 2. ಹನುಮಂಣನವರು ಕಂಚಿಗನಹಾಳ ವಾಸಸ್ಥರಾಗಿ ಮೃತಪಟ್ಟ ತಿಮ್ಮಣ್ಣನವರ ಜಿಂದಗಿ ಬಗ್ಯಾಗಿ ಬರತಕ್ಕ 226—10—8 ರೂಪಾಯಿಗಳ ಸಾಲವನ್ನು ವಸೂಲ್ ಮಾಡುವದಕ್ಕೆ ಸ್ ೧೯೦೧ನೆ ಇಸವಿ 7ನೆ ರೆಗ್ಯುಲೇಷನ್ ಮೇರಿಗೆ ಸರ್ಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾರೆ.

ಸದರಿ ದರಖಾಸ್ತುದಾರರಾದ 1. ತಿಮ್ಮಣ್ಣ, 2. ಹನುಮಂಣನವರ ಅರ್ಜಿಯನ್ನು ಸ್ ೧೯೦೩ನೆ ಇಸವಿ ಡಿಸೆಂಬರ್ ತಿಂಗಳು ತಾರೀಖು 18ರಲ್ಲು ಕೇಳಿ ಸರ್ಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯನ್ನು ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ತಿಮ್ಮಣ್ಣನವರ ಆಸ್ತಿಗೆ ಹಕ್ಕುದಾರರಾದ ವಿಸಿಷ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿ[redacted]

ಸ್ ೧೯೦೩ನೆ ಇಸವಿ ನವಂಬರ್ ತಿಂಗಳು 2ನೆ ತಾರೀಖಿನಲ್ಲಿ ಕೋರ್ಟು ಮೊಹರ್ ನಿಸಿ ನನ್ನ ದಸ್ತಖತ್ತೊಡನೆ ಕೊಡೋಣಾಗಿದೆ.

ಸ್ ೧೯೦೩—೧೯೦೪ನೆ ಇಸವಿ ಮಿಸ್ ಅರ್ಜೀ ನಂಬರ್ 141.

ಮೃತಪಟ್ಟ ಹರಿಹರದಲ್ಲಿದ್ದ ಅಬ್ದುಲ್‌ಖಾದರ್ ಸಾಹೇಬರ ಹೆಂಡತಿ ಖತ್ತಿಜಾಬೀ ಎಂಬವರ ಆಸ್ತೀ ವಿಷಯದಲ್ಲಿ—

ಅರ್ಜೀದಾರರು 1ನೆ ಅಬ್ದುಲ್‌ಖಾದರ್ ಸಾಹೇಬ್ ಬಿ ಮಹಮದಿಗಾಲೀಬ್, 2ನೆ ಅಬ್ದುಲ್‌ಅಜೀಜ್, 3ನೆ ಅಬ್ದುಲ್‌ರಹೀಂ ವೈನರ್, ಗಾರ್ಡಿಯನ್ 1ನೆ ಅರ್ಜಿದಾರ[redacted] ಅರ್ಜಿದಾರು), 5ನೆ ಜೈನಾಬಿ ಬಿ ಅಬ್ದುಲ್‌ಖಾದರ್, 6ನೆ ದರಬಿ[redacted]ತ್ತಿಜಾಬಿ ಎಂಬುವರಿಗೆ 1ನೆ ಅರ್ಜಿದಾರ್ ಗಂಡ, 2ರ ಲಾಗಾಯಿ[redacted]ಲೆ ಹರಿಹರದ ಸ್ಥಳದ ಅರ್ಜಿದಾರ್ರು ಹರಿಹರದ ವಾಸಸ್[redacted]

ಸ್ ೧೯೦೩—೧೯೦೪ನೆ ಇಸವಿ ಮಿಸ್ ಅರ್ಜೀ ನಂಬರ್ 159.

ಮೃತಪಟ್ಟ ಶಿವಮೊಗ್ಗ ತಾಲ್ಲೂಕು ಹರಕೆರೆಪೇಟೆ ಸಿದ್ದಂಣನ ಹೆಂಡತಿ ಹನುಮಕ್ಕನೆಂಬುವಳ ಆಸ್ತೀ ವಿಷಯದಲ್ಲಿ—

ಅರ್ಜೀದಾರರು 1ನೆ ಕುರುಬರ ಫಕೀರ ಬಿನ್ ನಾಗಂಣ, 2ನೆ ಇವನ ತಮ್ಮ ಸಿದ್ದ ಶಿವಮೊಗ್ಗ ತಾಲ್ಲೂಕು ಶ್ಯಂಗೇರಿ ಇನಾಂ ಗ್ರಾಮದ ಹರಕೇರಿ ವಾಸಿಗಳು, ಮೃತಪಟ್ಟ ಸದರೀ ಹನುಮಕ್ಕನಿಗೆ ಖಾಸಾ ಮೈದುನ ಮಕ್ಕಳಾಗಬೇಕೆಂಬ ಹಕ್ಕು ದಾರಿ ಮೇಲೆ ಹರಿಕೇರಿ ಸ್ಥಳದ ಅರ್ಜಿದಾರರು ಹರಕೇರಿ ವಾಸಸ್ಥರಾಗಿ ಮೃತಪಟ್ಟು ಹನುಮಕ್ಕನ ಜಿಂದಗಿ ಬಗ್ಯಾಗಿ ಬರತಕ್ಕ 128—12—0 ರೂಪಾಯಿಗಳ ಸಾಲವನ್ನು ವಸೂಲ್ಮಾಡುವದಕ್ಕೆ ಸ್ ೧೯೦೧ನೆ ಇಸವಿ 7ನೆ ರೆಗ್ಯುಲೇಷ್ಣ ಮೇರಿಗೆ ಸರಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾರೆ.

ಸದರೀ ದರಖಾಸ್ತುದಾರನಾದ 2ನೆ ಸಿದ್ದನ ಅರ್ಜಿಯನ್ನು ಸ್ ೧೯೦೩ನೆ ಇಸವಿ ಡಿಸೆಂಬರ್ ತಿಂಗಳು ತಾರೀಖು 18ರಲ್ಲು ಕೇಳಿ ಸರ್ಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯನ್ನು ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಹನುಮಕ್ಕನ ಆಸ್ತಿಗೆ ಹಕ್ಕುದಾರರಾದ ವಿಸಿಷ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇದೆ.

ಸ್ ೧೯೦೩ನೆ ಇಸವಿ ನವಂಬರು ತಿಂಗಳು 20ನೆ ತಾರೀಖಿನಲ್ಲಿ ಕೋರ್ಟು ಮೊಹರಿನಿಂ ನಮ್ಮ ದಸ್ತಖತ್ತೊಡನೆ ಕೊಡೋಣಾಗಿದೆ.

ಸಿ. ಶೇಷಯ್ಯಂಗಾರ್,
ಶಿರಸ್ತೇದಾರ.

ಚಿಕ್ಕಮಗಳೂರು ಸಬ್ ಜಡ್ಜರವರ ಕೋರ್ಟಿನಲ್ಲಿ.

ಸ್ ೧೯೦೩—೧೯೦೪ನೆ ಇಸವಿ ಅರ್ಜೀ ನಂಬರ್ 223.

ಮೃತಪಟ್ಟ ಸಿದ್ದಯ್ಯನ ಆಸ್ತೀ ವಿಷಯದಲ್ಲಿ—

ಅರ್ಜೀದಾರು) ಕಡೂರು ಡಿಸ್ಟ್ರಿಕ್ಟ್ ಚಿಕ್ಕಮಗಳೂರು ತಾಲ್ಲೂಕು ಮತ್ತಾವಾರದಲ್ಲಿರುವ ಲಕ್ಷ್ಮಮ್ಮ ಮೈನರ್, ಗಾರ್ಡಿಯರ್ ತಾಯಿ ಸಿದ್ದಮ್ಮ, ಮೃತಪಟ್ಟ ಸಿದ್ದಯ್ಯನಿಗೆ ಮಗಳು ಆಗಬೇಕೆಂಬ ಹಕ್ಕುದಾರಿ ಮೇಲೆ ಚಿಕ್ಕಮಗಳೂರು ತಾಲ್ಲೂಕು ಮತ್ತಾವಾರದಲ್ಲಿ ವಾಸಸ್ಥರಾಗಿ ಮೃತಪಟ್ಟ ಸಿದ್ದಯ್ಯನವರ ಜಿಂದಗಿ ಬಗ್ಯಾಗಿ ಬರತಕ್ಕ ಸಾಲವನ್ನು ವಸೂಲ್ ಮಾಡುವದಕ್ಕೆ 1901ನೆ ಇಸವಿ 7ನೆ ರೆಗ್ಯುಲೇಷ್ಣ ಪ್ರಕಾರ ಸರಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾರೆ.

ಸದರೀ ದರಖಾಸ್ತುದಾರರಾದ ಲಕ್ಷ್ಮಮ್ಮ ಮೈನರ್, ಗಾರ್ಡಿಯರ್ ತಾಯಿ ಸಿದ್ದಮ್ಮ ಇವರ ಅರ್ಜಿಯನ್ನು 1903ನೆ ಇಸವಿ ಡಿಸೆಂಬರ್ ತಿಂಗಳು ತಾರೀಖು 21ರಲ್ಲು ಕೇಳಿ ಸರ್ಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯನ್ನು ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಸಿದ್ದಯ್ಯನ ಆಸ್ತಿಗೆ ಹಕ್ಕುದಾರರಾದ ವಿಶಿಷ್ಟರೂ ಈ ಕೋರ್ಟಿನಲ್ಲಿ ಹಾಜರು ಇರಬೇಕೆಂದು ಇದರಿಂದ ತಿಳಿಯು ಪಡಿಸಿ ಇದೆ.

ಸ್ ೧೯೦೩ನೆ ಇಸವಿ ನವಂಬರ್ 24ನೆ ತಾರೀಖಿನಲ್ಲಿ ಕೋರ್ಟು ಮೊಹರಿನಿಂ ನಮ್ಮ ದಸ್ತಖತ್ತೊಡನೆ ಕೊಡೋಣಾಗಿದೆ.

ಸ್ ೧೯೦೩—೧೯೦೪ನೆ ಇಸವಿ ಅರ್ಜೀ ನಂಬರ್ 224.

ಮೃತಪಟ್ಟ ರಾಮಸ್ವಾಮೈಯ್ಯನವರ ಆಸ್ತೀ ವಿಷಯದಲ್ಲಿ—

ಅರ್ಜೀದಾರು) ಕಡೂರು ಡಿಸ್ಟ್ರಿಕ್ಟ್ ಚಿಕ್ಕಮಗಳೂರುನಲ್ಲಿರುವ 1ನೆ ನಾರಾಯಣ, 2ನೆ ವೆಂಕಟೇಶ ಮೈನರ್‌ಗಳು, ಗಾರ್ಡಿಯರ್ ತಾಯಿ ವೆಂಕಟಮ್ಮ, ಮೃತಪಟ್ಟ ರಾಮಸ್ವಾಮೈಯ್ಯನವರಿಗೆ ಮಕ್ಕಳು ಆಗಬೇಕೆಂಬ ಹಕ್ಕುದಾರೀ ಮೇಲೆ ಕೋಲಾರ ಡಿಸ್ಟ್ರಿಕ್ಟ್ ಕೋಲಾರ ತಾಲ್ಲೂಕು ಹುತ್ತೂರು ಮಾಗಣಿ ಜೋಡಿ ಚಾಮರಹಳ್ಳಿಯಲ್ಲಿ ವಾಸಸ್ಥರಾಗಿ ಮೃತಪಟ್ಟ ರಾಮಸ್ವಾಮೈಯ್ಯನವರ ಜಿಂದಗಿ ಬಗ್ಯಾಗಿ ಬರತಕ್ಕ ಸಾಲವನ್ನು ವಸೂಲ್ ಮಾಡುವದಕ್ಕೆ ಸ್ ೧೯೦೧ನೆ ಇಸವಿ 7ನೆ ರೆಗ್ಯುಲೇಷ್ಣ ಪ್ರಕಾರ ಸರ್ಟಿಫಿಕೇಟ್ ಬಗ್ಯೆಈ ಕೋರ್ಟಿಗೆ ಖಾಯಿಷ್ ಮಾಡಿ ಇರುತ್ತಾರೆ.

ಸದರೀ ದರಖಾಸ್ತುದಾರರಾದ ನಾರಾಯಣ, ವೆಂಕಟೇಶ ಮೈನರ್, ಗಾರ್ಡಿಯರ್ ತಾಯಿ ವೆಂಕಟಮ್ಮನವರ ಅರ್ಜಿಯನ್ನು ಸ್ ೧೯೦೩ನೆ ಇಸವಿ ಡಿಸೆಂಬರು ತಿಂಗಳು ತಾರೀಖು 21ರಲ್ಲು ಕೇಳಿ ಸರಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯನ್ನು ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ರಾಮಸ್ವಾಮೈಯ್ಯನ ಆಸ್ತಿಗೆ ಹಕ್ಕುದಾರರಾದ ವಿಸಿಷ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇದೆ.

ಸ್ ೧೯೦೩ನೆ ಇಸವಿ ನವಂಬರ್ 27ನೆ ತಾರೀಖಿನಲ್ಲಿ ಕೋರ್ಟಿನ ಮೊಹರು ಮತ್ತು ನಮ್ಮ ದಸ್ತಖತ್ತೊಡನೆ ಕೊಡೋಣಾಗಿದೆ.

ಡಿ. ಅಳಸಿಂಗ್ರಾಜಾರ್,
ಶಿರಸ್ತೇದಾರ್.

ಸಾಗರ ಮುನ್ಸೀಫ್ ಕೋರ್ಟಿನಲ್ಲಿ.

ದಿವಾಳಿಯಾದ ಡಿಕ್ರಿ ದೇಣೇದಾರರು ಹುಲಿಕೋಡ್ ಸುಬ್ಬಯ್ಯ ಬಿನ್ ತಿಮ್ಮಯ್ಯ ಎಂಬುವರ ವಿಷಯದಲ್ಲಿ—

ಸ್ ೧೯೦೩—04ನೆ ಇಸವಿ ದಿವಾಳಿ ಮಿ॥ ವ್ಯಾಜ್ಯದ ನಂಬರು 49.

ಹುಕುಂ.

ಮೇಲ್ಕಂಡ ಸುಬ್ಬಯ್ಯನು ಖುಲಾಸೆ ಮಾಡಿಸಬೇಕೆಂದು ಬರದುಕೊಂಡ ಅರ್ಜಿಯ ಅಂಕವು ಸಾಗರ ಮುನ್ಸೀಫರವರಾದ ವೆ॥ ಎಸ್. ಕೃಷ್ಣರಾವ್ ಯವರ ರೂಬರೂ ದಿವಾಳಿಯಾದವರ ತರಫ್ ಪ್ಲೀಡರ್ ವೆ॥ ಹೆಚ್. ಶಾಮರಾವ್‌ರವರ ಸಮಕ್ಷಮದಲ್ಲಿಯೂ ಮತ್ತು ಈ ಕೆಳಗೆ ನಮೂದಾದ ಐರ್ಜ ದಿವಾಳಿಯಾದವರ ಲೇಣೇದಾರರಾದ 1—2—3—4—5—6ನೆ ಯವರು ಗೈರ್‌ಹಾಜರು, ದರ್ಯಾಫ್ತ್ ಮಾಡಲ್ಪಟ್ಟಿತು. ಇದರಡೀಲಿ ನಮೂದಿಸಲ್ಪಟ್ಟ ಲೇಣೇದಾರರಿಗೆ ಈ ದರ್ಯಾಫ್ತ್ ನೋಟಿಸ್ ಜಾರಿಯಾಗಿದ್ದುನ್ನು ಅವರು ಖುದ್ದಾಗಿಯಾಗಲಿ ಲಾಯರ್ ಮೂಲಕವಾಗಿಯಾಗಲಿ ಹಾಜರಾಗುವದಕ್ಕೆ ತಪ್ಪಿಹೋದರು.

ಇದಕ್ಕೆ ಲಗ್ನತ್ತಾಗಿರುವ ಪಟ್ಟಿಯಲ್ಲಿ ಕಂಡ ಬಹುಸಂಖ್ಯಾತವಾದ ಜನರು ಅವರ ಹೆಸರುಗಳಿಗೆ ಎದುರಾಗಿ ದಾಖಲಾಗಿರುವ ಸಾಲದ ಮೊಬಲಗುಗಳಿಗೆ ಲೇಣೇದಾರರೆಂದು ರುಜು ಮಾಡಿಥಾರೆಂದು ಇದರಿಂದ ನಿಶ್ಚಯಿಸಿ ತೀರ್ಮಾನ ಮಾಡಲ್ಪಟ್ಟಿರುತ್ತದೆ:—

ನಂ.	ಲೇಣೇದಾರರ ಹೆಸರು, ವಿವರ ಮತ್ತು ವಾಸಸ್ಥಳ.	ಸಾಲವೆಂದು ರುಜು ವಾಥ ಮೊಬಲಗು.	ಸಾಲಗಳ ಸ್ವಾಭಾವ, ಪ್ರತಿಫಲ ಮತ್ತು (ಏನಾದರು) ಯಿಹಾಡು.
1	1ನೆ ಪುಟ್ಟಪ್ಪ, 2ನೆ ಬಿಷ್ಟಪ್ಪ ಮೈನರ್ ಗಾ॥ ತಾಯಿ ಪರಮಮ್ಮ, ಸಾಗರ ತಾ॥ ಶಿರವಂತೆ ಮಾ॥ ಕಂಡ್ಲದ ವಾಶಿಗಳು.	24—0—0	ಈ ಕೋರ್ಟು O. S. 66—01-02. Ex. 66-02-03ನೆ ಕೆ॥ ಸಮ್ಮಂಧ.
2	3ನೆ ಪುಟ್ಟಭಟ್ಟ, 4ನೆ ನಾರಣಭಟ್ಟ ಮೈನರ್ ಗಾ॥ ತಾಯಿ ವೆಂಕಮ್ಮ, ಹುಳಿಗಾರ್ ವಾಶಿ.	30—0—0	ಘವೆತಿ ಹುಳಿಗಾರ್ ಮರಿಭಟ್ಟನು ಹುಲಿಕೋಡ್ ಸುಬ್ಬಯ್ಯನಮೇಲೆ ಪಡಕೊಂಡ ಡಿಕ್ರಿ ಮೊಬಲಗು.
3	5ನೆ ಮಾಲೇರ ಚಿಕ್ಕರಂಗ, ಸಾಗರ ತಾ॥ ಕಡಗಳಲೆ ಮಾ॥ ಮಂಡಗೆಡ್ಲೆ ವಾಶಿ.	48—0—0	ದಸ್ತೈವಜು ಸಮ್ಮಂಧ ಅಸಲ್ ಬಡ್ಡಿ ಮೊಬಲಗು
4	6ನೆ ಕಾನ್ಲೆ ದೇವಪ್ಪ, ಸಾಗರ ಈಸಬಾ ವಾಶಿ.	20—0—0	ಕಂತು ದಸ್ತೈವಜು ಮೊಬಲಗು
	ಜುಮ್ಲಾ ..	122—0—0	

ಸ್ ೧೯೦೩ನೆ ಇಸವಿ ಅಕ್ಟೋಬರು ತಾರೀಖು 30ರಲ್ಲು ಕೋರ್ಟು ಮೊಹರ್ ನಮ್ಮ ದಸ್ತಖತ್ತುನಿಸಿ ಕೊಡಲ್ಪಟ್ಟಿದೆ.

ಎಸ್. ಕೃಷ್ಣರಾವ್,
ಮುನ್ಸೀಫ್.

ಅಮೃತಮಹಲ್ ಇಲಾಖಾ.

ಇಸ್ತಿಹಾರ್‌ನಾಮೆ.

ತಾರೀಖು 28ನೆ ನವಂಬರ್ ೧೯೦೩, ಮೊಕ್ಕಾಂ ಮೈಸೂರು.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ:—ಮೈಸೂರು ಶೀಮೆಯ ಅಮೃತಮಹಲ್ ಇಲಾಖಾದಲ್ಲಿರುವ ನಾಲ್ಕು ವರ್ಷ ವಯಸ್ಸುಳ್ಳ ಕೆಲವು ಹೋರಿಗಳನ್ನು ಮತ್ತು ಕೆಲವು ಹಸುಗಳನ್ನು ಹಾಸನದ ತಾಲ್ಲೂಕು ಸೋಮನಹಳ್ಳಿ ಕಾವಲಿನಲ್ಲಿ ಸ್ ೧೯೦೩ನೆ ಇಸವಿ ಡಿಸೆಂಬರು 17ನೆ ತಾರೀಖು ಗುರುವಾರದ ಲಾಗಾಯಿತು ಬಹಿರಂಗವಾಗಿ ಹರಾಜು ಮಾಡಲ್ಪಡುತ್ತೆ. ಇಷ್ಟವುಳ್ಳವರು ಛಡ ದರಖಾಸ್ತು ಮಾಡಿ ಪಡೆಯಬಹುದು.

ಹೆಚ್. ನಂಜುಂಡರಾಜೆ ಅರಸ್,
ಸೂಪರಿಟೆಂಡೆಂಟ್.